

# ತಟ್ಟೆಗಳಲ್ಲ ಚಿಟ್ಟೆಗಳು!

ಅರಳುಗಣ್ಣಲಿ ಬೆಳಗುತಿರುವ
ಕನಸುಗಳು ನೀವು. ಕೇವಲ
ತಟ್ಟೆಗಳಲ್ಲ, ಮನದ ಚಿಟ್ಟೆಗಳು!

ಆಸೆಗಣ್ಣಲಿ ನೇತುಹಾಕಿ
ಅದರ ನೆರಳಿಗೆ ಮತ್ತೊಂದು
ತೂಗು ಹಾಕುತಿರುವೆ

ಬಿಸಿಲಿಗೆ ಬಾಡಲಾರವು
ಬಿರುಗಾಳಿಗೆ ಬೀಳಲಾರವು
ನನ್ನ ಕನಸಿನ ಬಣ್ಣ ಅವುಗಳಿಗೆ

ನನ್ನೆಲ್ಲ ಭಾವನೆಗಳ ಪಾತ್ರೆಯ
ಬೇಕಾದಂತೆ ಹಿಡಿದುಕಟ್ಟಿದೆ
ಕಲ್ಪನೆಯಲಿ ಬೆಳೆದು ಅರಳಲಿ

ನಿಮ್ಮನ್ನು ತೂಗುಹಾಕುತ
ಮತ್ತೊಮ್ಮೆ ಮಗುವಾಗಿರುವೆ
ಕನಸುಗಳಾಗಿ ಅವು ತೇಲಲಿ

● ಶ್ರೀಧರ ಎಸ್‌. ಹಳ್ಳೂರ

# ಹಾರದ ತಟ್ಟೆಗಳು

ಅಲ್ಲೆಲ್ಲೋ ಇವೆಯೆಂತೆ ಅನ್ಯಗ್ರಹಗಳು
ವಿಚಿತ್ರ ಜೀವಿಗಳ ವಾಸಸ್ಥಾನಗಳು
ಬರುವರಂತೆ ಭೂಮಿಗೆ ಅವರು
ಹಾರುವ ತಟ್ಟೆಗಳನ್ನೇರಿ

ಆದರಿಲ್ಲಿವೆ ಹಾರದ ತಟ್ಟೆಗಳು
ತೂಗುವ ಬಣ್ಣದ ತಟ್ಟೆಗಳು
ಖಾಲಿ ತಟ್ಟೆ ನೋಡಿ,
ನೆನಪಾಗಿದೆ ಖಾಲಿ ಹೊಟ್ಟೆ

ರಂಗುಬಳಿದ ತುಟಿಗಳಂತೆ
ತಟ್ಟೆಗಳಿಗೂ ರಂಗು

ತಟ್ಟೆಯ ಸೂತ್ರ ಮಾತ್ರ ಹುಡುಗಿ ಕೈಲಿ
ಅವಳಿಗೇನು ಗೊತ್ತು? ಬದುಕಿನ ರಂಗು
ಬಹಳ ಬೇಗ ಮಾಸುವುದೆಂದು
ಒಂದು ಮಳೆಗೆ, ಕಣ್ಣೀರ ಹನಿಗೆ

ಕರಗೇ ಹೋಗುವುದೆಂದು!

● ಎಂ. ಶಾಂತ ಕುಮಾರಿ